





ಕುಂಭಮೇಳದಲ್ಲಿ ಲೇಖಕಿ



ಸಂಗಮದಲ್ಲಿ ನಿರ್ಮಿಸಲಾಗಿರುವ ತಾತ್ಕಾಲಿಕ ಸೇತುವೆ

ನಡೆಯುತ್ತಿದ್ದರು (ಕಡಿಮೆ ಎಂದರೂ ನಾಲ್ಕೈದು ಕಿಲೋಮೀಟರ್‌ನಷ್ಟಾದರೂ ನಡೆಯಬೇಕಿತ್ತು).

ಜನವರಿ 13ರ ಬೆಳಿಗ್ಗೆ ಎಂಟು ಗಂಟೆಗೆ, ನಾವು ಗಂಗೆಯಲ್ಲಿ ಮಿಂದೇಳಲು ಚಿಕ್ಕ ಚಿಕ್ಕ ಕೈ ಚೀಲಗಳಲ್ಲಿ ಬಟ್ಟೆಗಳನ್ನು ತುಂಬಿಕೊಂಡು ಹೊರಟೆವು. ರಸ್ತೆಗುಂಟ ತಿಂಡಿತಿನಿಸುಗಳ ಅಂಗಡಿಗಳು, ದೊಂಬರಾಟ, ಲಕ್ಷಾಂತರ ಜನ, ಸಿಂಧೂರ, ರುದ್ರಾಕ್ಷಿ, ರೈಲುತಂಬಿಗೆ ವಾಟರ್ ಕ್ಯಾನ್‌ಗಳ ಅಂಗಡಿಗಳು. ನನಗೆ ಹಳೆಯ ಹಿಂದಿ ಸಿನಿಮಾಗಳಲ್ಲಿನ ಜಾತ್ರೆ ದೃಶ್ಯಗಳು ನೆನಪಾಗುತ್ತಿದ್ದವು. ಹಳೆಯ ಚಲನಚಿತ್ರದ ಹೀರೊಗಳು ಇಂತಹ ಕುಂಭಮೇಳದಲ್ಲಿ ಕಳೆದುಹೋಗಿ ಕಡೆಗೆ ಕಳ್ಳನೋ ಪೊಲೀಸೋ ಆಗಿ ಮತ್ತೆ ಇಂತಹ ಜಾತ್ರೆಯಲ್ಲಿಯೇ ಸಿಗುವ ಚಿತ್ರಣ ನೆನಪಾದವು.

ಜನ... ಜನ... ಜನ... ಜನಜಂಗುಳಿಯ ನಡುವೆ ನಾವು ಖುಷಿಯಾಗಿಯೇ ನಡೆದು ಸಾಗಿದೆವು. ನಾವು ಅಲ್ಲೇ ಒಂದು ಫುಡ್ ಕೋರ್ಟ್‌ನಲ್ಲಿ ಚಹಾ ಕುಡಿಯಲು ಹೋದಾಗ, 'ನಾವು ಕನ್ನಡಿಗರು' ಎಂದು ತಿಳಿದ ಅವರು ನಮ್ಮ ನಂದಿನಿ ಹಾಲನ್ನೇ ಉಪಯೋಗಿಸುತ್ತಿರುವುದಾಗಿ ತಿಳಿಸಿದರು. ನಮಗೂ ಖುಷಿ. 'ನಾನು ನಂದಿನಿ, ಪ್ರಯಾಗ್‌ಗೆ